**ಸಣ್ಣ ಕಥೆ**

# ಸಂಘರ್ಷ

**ಶ್ರೀಮತಿ U S ಮಾಲತಿ ಪ್ರಕಾಶ್, ಎಂ. ಎ**

ಮನದ ಮೂಲೆಯಲ್ಲಿ ಏನೋ ಒಂದು ಆಸೆ.....ಮದುವೆ ನಂತರದ ಜೀವನ ಹೀಗೆಯೇ ಇರಬೇಕು ಅಂತ ಕಲ್ಪನೆ. ಆದರೆ ನಿರೀಕ್ಷೆಗಳು ಕಲ್ಪನೆಗೆ ಮೀರಿ ನಡೆದು ಬಿಟ್ಟಿತು. ಗಂಡು ನೋಡಲಿಲ್ಲ ಉಪ್ಪಿಟ್ಟು, ಕೇಸರಿ ಬಾತು ತಿನ್ನಲಿಲ್ಲ, ಆದರೂ ಒಪ್ಪಿ ಮದುವೆ ನಡೆದೇ ಹೋಯಿತು. ಗಂಡನ ಮನೆ ಹೊಸಿಲು ದಾಟಿ ಬಂದಾಯಿತು . ಮನೆಯಲ್ಲಿ ಎಲ್ಲರೂ ತಮ್ಮ ತಮ್ಮ ಕೋಣೆ ಸೇರಿದರು. ಅಂತಹ ಸಂಭ್ರಮಿಸಿ ಸ್ವಾಗತಿಸುವ ಹೆಣ್ಣು ಜೀವವಿಲ್ಲ . ಒಬ್ಬಳು ನಾದಿನಿ ಅಷ್ಟೇ. ಕಣ್ಣ ಅಂಚಿನಲ್ಲಿ ಹನಿ ಜಾರಿತ್ತು . ಯಜಮಾನರು ಅವರ ಪಾಡಿಗೆ ಏನೋ ಓದುವುದರಲ್ಲಿ ಮಗ್ನ. ಮಾತಿಲ್ಲ ಕಥೆ ಇಲ್ಲ. ಏನೋ ಸರಿ ಇಲ್ಲ ಅನಿಸಿದ್ದು ಸಹಜ. ಮದುವೆ ಇಷ್ಟ ಇರಲಿಲ್ಲವ ಅಥಾವ ನಾನಾ....

ಉತ್ತರವಿಲ್ಲದ ಪ್ರಶ್ನೆಗಳ ಸುರಿಮಳೆ, ಮನದಲ್ಲಿ ರಿಂಗಣ. ಸರಿ ರಾತ್ರಿ ಕಳೆದು ಬೆಳಕು ಹರಿಯಿತು. ಏನು ಮಾಡಲು ತೋಚದೆ ನಿತ್ಯ ಕರ್ಮ ಮುಗಿಸುವ ವೇಳೆಗೆ ದನಿ ಬಂದಿತ್ತು ತಿಂಡಿ ರೆಡಿ ಇದೆ ಮಾಡಿ ಆಫೀಸ್ ಮುಗಿಸಿ ಬರುವೆ ಎಂದು. ಉತ್ತರಕ್ಕೆ ಕಾಯದೇ ಹೋರಟಾಗಿತ್ತು . ಓಹ್ ಇದೆಲ್ಲಿ ಬಂದೆ ಅನ್ನಿಸಿತು ಒಮ್ಮೆ. ಮನೆಯಲ್ಲಿ ಅಚ್ಚು ಮೆಚ್ಚಿನ ಮಗಳು, ಅತಿ ಪ್ರೀತಿಸುವ ಅಪ್ಪ , ಅಮ್ಮ , ಅಣ್ಣಾ . ನನ್ನದೇ ಕೊನೆ ಮಾತು ಅಲ್ಲಿ. ವಿಪರೀತ ಅನ್ನಿಸುವಷ್ಟು ಮಾತು. ಶಾಲಾ, ಕಾಲೇಜುನಲ್ಲಿ ಫಸ್ಟ್ ರಾಂಕಿನ್ ವಿದ್ಯಾರ್ಥಿ ಅಲ್ಲದಿದ್ದರೂ ಫಸ್ಟ್ ಕ್ಲಾಸ್ ಎಂದು ತಪ್ಪಿಲ್ಲ. ತುಂಬಾ ಗೆಳತಿಯರು. ಸದಾ ಖುಷಿ ಖುಷಿಯಾಗಿ ಇರುವ ವಯಸ್ಸು. ಅಭ್ಯಾಸ, ಎಲ್ಲಾ ನೆನಪಾಗಿ ಅಳು ಬಂದಿತ್ತು ಹೇಗೆ ನಿಭಾಯಿಸಬೇಕು ಎಂದು ಗೊತ್ತಾಗದೆ ನೊಂದಿತ್ತು ಮನ. ಸರಿ ಸಂಜೆ ಆಯಿತು ಕಾಫಿ ಬಂದಿತ್ತು ಬೋಂಡನು ಆಯಿತು. ಇದೇ ರೀತಿ ಒಂದು ವಾರ ಕಳೆದರೂ ಇನ್ನೂ ಮಾತು ಇಲ್ಲ ಕತೆ ಇಲ್ಲ . ಕೋಪಗೊಂಡ ಮನಸ್ಸು ಎಲ್ಲಿ ತಪ್ಪು ಆಗಿದೆ ಎಂದು ತಿಳಿಯಲಿಲ್ಲ . ಎಲ್ಲಾ ಗಂಡು ಮಕ್ಕಳ ರಾಜ್ಯ ಮನೆಯಲ್ಲಿ. ನಾದಿನಿ ಗಂಡನ ಮನೆ ಮನೆಗೆ ಹೋಗಿದ್ದಳು .ಆದರ್ಶ ದಾಂಪತ್ಯದ ಕನಸಿಗೆ ಪೆಟ್ಟು ಬಿದ್ದಿತ್ತು . ಆದರೆ ಎಲ್ಲರೂ ಸಭ್ಯರೇ ಆದರೆ ಏಕೆ ಹೀಗೆ ಎಂದು ಅರ್ಥವಾಗಲ್ಲಿಲ್ಲ . ಎಂದಿನಂತೆ ಕೆಲಸಗಳು ಅದರ ಪಾಡಿಗೆ ಅದು ನಡೆದಿತ್ತು . ಮೊದಲ ರಾತ್ರಿಯ ಸಂಭ್ರಮವಿಲ್ಲ , ವಿಚಾರ ವಿಮರ್ಶೆ ಇಲ್ಲದೆ ಅಪ್ಪ ಅಮ್ಮ ಮದುವೆಗೆ ಒಪ್ಪಿಗೆ ನೀಡಿದ್ದು ಬೇಸರ ತರಿಸುತ್ತದೆ. ಸರಿ ಕೆಲಸವಿಲ್ಲದೆ ಕೂರಲು ಸಾಧ್ಯವಿಲ್ಲ ಎಂದು ಅನ್ನಿಸಿ ಯಜಮಾನರ ಬಳಿ ಪ್ರಶ್ನೆ ಮಾಡಿದೆ ಅಡುಗೆ ಆಕೆಯನ್ನು ಬಿಡಿಸಿ ಅಡುಗೆ ಮಾಡುವೆ ಎಂದು. ಟಪ್ಪ ಅಂತ ಬಂದಿತ್ತು ಉತ್ತರ ಬೇಡ ನಿಂಗೆ ಏಕೆ ಕಷ್ಟ ಅಂತ. ಮುಂದೆ ಮಾತಿಗೆ ಅವಕಾಶವೇ ಇಲ್ಲದೆ ಸಂಭಾಷಣೆ ಮುಗಿದಿತ್ತು . ಏಕೆ ಹೀಗೆ ತಿಳಿಯದಾಯಿತು. ತವರಿಗೆ ಹೋಗಬೇಕು ಎಂದು ಮನ ಹಠ ಹಿಡಿದಿತ್ತು ಆದರೆ ಕೇಳಲು ಸಂಕೋಚ. ಹೀಗೆ ತಿಂಗಳು ಕಳೆದರೂ ಇನ್ನೂ ಏನೇನೋ ಬದಲಾವಣೆ ಇಲ್ಲ. ಸರಿ ಕೆಲಸ ಮಾಡುವ ಅವಕಾಶ ಹುಡುಕಿ ಹುಡುಕಿ ಮಾಡುವ ಅಭ್ಯಾಸ ಮಾಡಿ

ಕೊಂಡು ಸಮಯ ಕೊಲ್ಲುವ ಪ್ರಯತ್ನ ನಡೆಸೆದಿ. 2..3 ತಿಂಗಳು ಕಳೆದರೂ ಇನ್ನೂ ಮಾತು ಇಲ್ಲ ಬರೀ ಊಟ, ತಿಂಡಿ, ಸಾಕು, ಬೇಕು ಅಷ್ಟರಲ್ಲಿ ಇತ್ತು ಸಂಬಂಧ. ಅಂದು ಕೊಂಡೆ ಶಾಪ ಗ್ರಸ್ಥ ಅಪ್ಸರೆ, ನಗು ಆವರಿಸಿತ್ತು . ಇಲ್ಲಿ ಜಿಜ್ಞಾಸೆಯಾ ಪ್ರಶ್ನೆ ಇಲ್ಲ. ದಿನ ಕಳೆದಂತೆ ಸರಿಯಾಗುತ್ತೆ ಅನ್ನುವ ಅರಿವು, ಭರವಸೆ ಇದೆ. ಒಮ್ಮೆ ಹೀಗೆ ಏನೋ ಬೇಕಿತ್ತು ಅಂತ ಅಡುಗೆ ಮನೆ ಕಡೆ ಹೊರಟಿದ್ದ ನಂಗೆ ಪಿಸು ಮಾತುಗಳು ಕೇಳಿ ದಿಗ್ ಭ್ರಮೆ ಆಯಿತು, ನೋಡಿದರೆ ಅಡುಗೆ ಆಕೆ ಏನೋ ಸಣ್ಣ ಸಣ್ಣ ಪಟ್ಟಣಗಳನ್ನು ಕಿಟಕಿಯಲ್ಲಿ ಯಾರಿಗೋ ಕೊಡುತಿದ್ದಳು . ನನ್ನ ಕಡೆ ಗಮನ ಇರಲಿಲ್ಲ. ಸುಮ್ಮನೆ ನಿಂತ ನಂಗೆ ಕೇಳಿಸಿದ್ದು ಮುಂದಿನ ವಾರ ಬಾ, ಈಗಿನ ದುಡ್ಡು ಕೊಟ್ಟು ಹೋಗು. ಆದರೆ ಅರ್ಥ ಆಗಲಿಲ್ಲ ಸುಮ್ಮನೆ ಹೋದರೆ ತಪ್ಪಾಗಿ ಕಾಣ ಬಹುದು ಅಂತ ಕಾಫಿ ಕೊಡಿ ಎಂದು ಕೇಳಿ ತಗೊಂಡು ಹೋಗದೆ ಬೇರೆ ದಾರಿ ಇರಲಿಲ್ಲ . ಮನೆಯಲ್ಲಿ ಯಾರಿಗೂ ಹೇಳದೆ ಇರೋಕ್ಕೆ ಆಗಲ್ಲಾ ಹೇಳಿದರು ಕೇಳುವವರು ಇಲ್ಲದಂತಾಗಿದೆ . ಸರಿ ಮುಂದಿನ ದಿನಗಳಲ್ಲಿ ಇನ್ನಷ್ಟು ಪತ್ತೇದಾರಿ ಮಾಡೋಣ ಎಂದು ಸುಮ್ಮನಾದೇ. ಮತ್ತೆ ಮತ್ತೆ ಅದೇ ಪುನರಾವರ್ತನೆ ನಡೆದಿತ್ತು. ಗೊತ್ತಿಲ್ಲ ಏನು ಮಾಡಬೇಕು ಎಂದು. ಹೀಗೆ ಹಲವು ಬಾರಿ ನಡೆಯುವ ಹೊತ್ತಿಗೆ ಸಕಾಗಿತ್ತು. ಮೈದುನನಿಗೆ ಹೇಳಿದೆ ಅವನು ಸರಿ ನೋಡೋಣ ಎಂದ. ನಾವು ಕದ್ದು ಕಳ್ಳತನದ ಮಾಲೂ ಹಿಡಿದು ಮನೆಯಲ್ಲಿ ಹೇಳಿ ಅಡುಗೆ ಆಕೆಯನ್ನು ಬಿಡಿಸಿ ಅಡುಗೆ ಜವಾಬ್ದಾರಿ ವಹಿಸಿ ಕೊಂಡು ಈ ಮೂಲಕ ಮನೆಯವರ ಜೊತೆ ಜೋತೆ ಜಾಸ್ತಿ ಒಡನಾಟ ಶುರುವಾಗಿದೆ. ಏನೋ ಉತ್ಸಾಹ, ಯಜಮಾನರ ಗಮನ ಸ್ವಲ್ಪ ವಾಲಿದೇ ಅನ್ನಿಸುತ್ತೆ. ಒಂದು ಮುಗುಳ್ನಗೆ ಬೀರುತ್ತಾ ಹೋಗುತ್ತಾರೆ ಆಸೀಸ್ಗೆ , ಏನೋ ಸಾಧಿಸಿದ ಆನಂದ ಮುದ ನೀಡಿತು. ಮನೆಯಲ್ಲಿ ಇದ್ದ ನಾಲ್ಕು ಮಂದಿ ಈಗ ಮಾತನಾಡವ ಹಂತ ಮುಟ್ಟಿತು. ಆದರೆ ಕಾರಣ ತಿಳಿಯಲಿಲ್ಲ ಯಾಕೆ ಯಜಮಾನ ಮೌನಿ. ಅವರ ಅಮ್ಮ ಹೋಗಿ ಇನ್ನೂ ವರ್ಷ ಆಗಿಲ್ಲ ಅದಕ್ಕೆ ಇವರು ಹೀಗೆ ಇರಬಹುದು ಅಂದು ಕೊಂಡು ಯಾವುದಕ್ಕು ಬಲವಂತ ಮಾಡಲು ಮನಸ್ಸು ಬರುತ್ತಿಲ್ಲ . ಹೀಗಾಗಿ ಅವರ ಅವರ ಪಾಡಿಗೆ ಅವರು. ಒಮ್ಮೆ ಯಜಮಾನರಿಗೆ ಸ್ವಲ್ಪ ಹುಷಾರು ತಪ್ಪಿದೆ ಅನ್ನಿಸಿತು, ಅವರು ರಗ್ಗು ಹೊದ್ದು ಮಲಗಿರುವದನ್ನು ಕಂಡು ಭಯ ಆಯಿತು. ಹಣೆ ಮುಟ್ಟಿ ನೋಡಿ ಸುಡುತ್ತಿತ್ತು , ಗಾಬರಿಗೊಂಡು ಮೈದುನನ ಕರೆದು ಬಂದೆ. ಅವರು ನೋಡಿ ಏನು ಇಲ್ಲ ಸ್ವಲ್ಪ ಜ್ವರ ಅಂತ ಹೇಳಿ ಮಾತ್ರೆ ಕೊಟ್ಟುರು . ಸ್ವಲ್ಪ ಒದ್ದೆ ಬಟ್ಟೆ ಹಾಕಿ ಎಂದು ನಡೆದೇ ಬಿಟ್ಟರು. ಅವರು ವೈದ್ಯರು. ರಾತ್ರಿ ಪೂರ ನಿದ್ದೆ ಇಲ್ಲದೆ ಕಾದು ಕುಳಿತು ಹಾಗೆ ಮೆಲ್ಲಗೆ ಯಾವಾಗ ನಿದ್ದೆಗೆ ಜಾರಿ ಹಾಸಿಗೆಯಲ್ಲಿ ಓರಗಿ ಬೆಳಕು ಹರಿಯುವ ಹೊತ್ತಿಗೆ ಹಾಸಿಗೆಯಲ್ಲಿ ಯಜಮಾನರು ಅಲ್ಲಿ ಇರಲಿಲ್ಲ. ಮನೆಯಲ್ಲ ಹುಡುಕಿದೆ ಕೊನೆಗೆ ನೋಡಿದರೆ ಮನೆಯ ಮುಂದೆ ಚಿಕ್ಕ ತೋಟದಲ್ಲಿ ಕಾಪಿ ಹೀರುವ ದೃಶ್ಯ ಕಂಡು ಸ್ವಲ್ಪ ಸಮಾಧಾನವಾಗಿ ಅಡುಗೆ ಕೋಣೆ ಕಡೆ ನಡೆದೇ. ಎರಡು ದಿನಗಳ ವಿಶ್ರಾಂತಿ ಪಡೆದು ಮತ್ತೆ ಕೆಲಸಕ್ಕೆ ಹೊರಟರು. ಒಂದೇ ಕೋಣೆ ಒಂದೇ ಮಂಚ ಮಾತು ಇಲ್ಲ ,ಬರೀ ಕನಸುಗಳ ಲೋಕದಲ್ಲಿ ಮುಳುಗಿ ತೇಲಿ ತೇಲಿ ಬರುವವುದಷ್ಟೇ ಕೆಲಸವಾಯಿತು . ವರ್ಷ ಕಳೆದಂತೆ ನಮ್ಮ ಸಂವೇದನೆ, ಉಸಿರು ಕಟ್ಟಿಸಿವ ಬದಲು ಅಭ್ಯಾಸವಾಗಿ ಏನೋ ಒಂದು ತರ ಸುಖವಿದೆ ಅಂತ ಜೀವನ ಪಯಣ ಸಾಗಿತ್ತು. ಆದರೆ ಕೆಲವೊಮ್ಮೆ ಭಯಂಕರ ತಳಮಳ, ತಲ್ಲಣ ಉಂಟು ಮಾಡುವ ಮೂಲಕ ತಮ್ಮ ಹೃದಯದ ಬಡಿತ ಹೆಚ್ಚಿಸಿದೆ . ಎಲ್ಲವೂ ಸರಿ ಇದೆ ಎಂದು ಮನಸ್ಸಿಗೆ ಮುದ ನೀಡುವ ಮೂಲಕ ಸಂದೇಶ ರವಾನೆ ಆಗುತ್ತದೆ. ದಿನ ನಿತ್ಯ ಯಜಮಾನರು ಏನೋ ಮಾತ್ರೆ ಸೇವಿಸುವುದು ನೋಡಿದ್ದೇ ಆದರೆ ಕೇಳಿರಲ್ಲಿಲ್ಲ .

ಎರಡು ವರ್ಷಗಳ ಕಾಲ ಸರಿದು ಹೋದದ್ದೇ ಅರಿವಿಗೆ ಬರಲಿಲ್ಲ . ಕಾತರ,ನಿರೀಕ್ಷೆ ಇದೆ ಎಂದು ಮನಸ್ಸಿಗೆ ತಿಳಿಸಿ ಹೇಳಕ್ಕೂ ಆಗದಂತೆ ಅಭ್ಯಾಸವಾಗಿತ್ತು . ಹಾಗಂತ ಬೇಸರ ಅಥಾವ ವೇದಾಂತಿಯ ಸನ್ಯಾಸ ದೀಕ್ಷೆ ಪಡೆಯುವ ನಿಟ್ಟಿನಲ್ಲಿ ಯೋಚನೆ, ಸೂಚನೆ ಯಾವುದೇ ರೀತಿಯ ಅಹಿತಕರ ಘಟನೆ ಸಂಭವಿಸದಂತೆ ಆಸೆ ,ಕನಸು ಕೂಡ ಸುಳಿಯಲ್ಲಿಲ್ಲ . ಅಮ್ಮನ ಮನೆಗೆ ಹೋಗಿ ಬರುವ ಸಂಭ್ರಮ ಇದ್ದೇ ಇತ್ತು. ಎಲ್ಲರೂ ಕೇಳುವುದು ಒಂದೇ ಪ್ರಶ್ನೆ ವಿಶೇಷ ಇಲ್ಲವಾ? ನಕ್ಕು ಉತ್ತರ ಹಾರಿಸಿ ಬಿಡುವ ಬಿಡುವ ಕಲೆ ಕರಗತವಾಯಿತು . ಈಗಿನ ಕಾಲದವರು ಏನೋ ಮಾಡಿ ಎಂದು ಅಪ್ಪ ಅಮ್ಮ ಸುಮ್ಮನಾಗಿದ್ರು ವಿಧಿ ಇಲ್ಲದೇ. ಅತಿ ಶ್ರೀಮಂತ ಕುಟುಂಬ, ಯಾವುದಕ್ಕು ಬರವಿಲ್ಲ . ಒಮ್ಮೆ ಹೀಗೆ ಯಜಮಾನರಿಗೆ ತುಂಬಾ ಆರೋಗ್ಯ ತಪ್ಪಿತು. ಮೈದುನ ನರ್ಸಿಂಗ್ ಹೋಂಗೆ ಅಡಮಿಟ್ ಮಾಡಿಕೊಂಡ. ಎಲ್ಲಾ ಟೆಸ್ಟಗಳೂ ಮುಗಿತು ಆದರೂ ರೋಗ ಇಂತಹದೇ ಅಂತ ಹೇಳಲಿಲ್ಲ. ದಿನ ಮನೆ ,ಆಸ್ಪತ್ರೆ ಅಂತ ಓಡಾಡಿ ಓಡಾಡಿ ಸಾಕನಿಸಿತ್ತು . ಕರ್ತವ್ಯದ ಕರೆ. ಹದಿನೈದು ದಿನಗಳ ನಂತರ ಮನೆಗೆ ಬಂದು ಆಯಿತು. ಮತ್ತೆ ಎಂದಿನಂತೆ ತಮ್ಮ ತಮ್ಮ ಕೆಲಸ ಕಾರ್ಯಗಳಿಗೆ ತಾವು ತಾವು ಹಿಂತಿರುಗಿ ಆಗಿತ್ತು. ಯಜಮಾನರು ಈಗ ತುಂಬಾ ಮಾತನಾಡಲು ಶುರು ಮಾಡಿದರು. ಮನದ ಮೂಲೆಯಲ್ಲಿ ಕುಳಿತ ಇನಯಾ ಬಾಹ್ಯಾ ಪ್ರಪಂಚಕ್ಕೆ ಮರಳಿದ ಎಂದು ಮನ ತುಂಬಿ, ಭಾವನಾತ್ಮಕ ಸಂಬಂಧ ಗಟ್ಟಿಯಾಗಿತ್ತು ಎಂದು ಸಂತಸ ಪಡುವ ಅಗತ್ಯವಿಲ್ಲ ಎಂದು ಮನ ಹಠ ಮಾಡಿ ಕೂತು ಬಿಟ್ಟುತ್ತು . ಏಕೆ ಹೀಗೆ ಮಾಡಿದೆ ನೀನು ಎಂದು ಸಾವಿರ ಸಾವಿರ ಪ್ರಶ್ನೆ ಕಾಡುತ್ತ ಬಂದಿದೆ. ಆಫೀಸಿನ ಸಮಯದಲ್ಲಿ ಫೋನ್ ಕಾಲ್ ಬಂತು ಯಜಮಾನರು ಇನ್ನು ಇಲ್ಲ ಅಂತ. ಗಾಬರಿಯಲ್ಲಿ ಕುಸಿದು ದಿಕ್ಕು ತೋಚದಾದೆ. ಎಲ್ಲರಿಗೂ ಸುದ್ದಿ ಮುಟ್ಟಿತು. ಜನ ಬರ ತೊಡಗಿದರು . ಕಾಡಿದ ಪ್ರಶ್ನೆ ಏನು ಆಯಿತು, ಇನ್ನು ಏನು ಮಾಡಬೇಕು ಎಂಬುದು . ಎಲ್ಲಾ ಕಾರ್ಯಗಳು ನಡೆಯುತ್ತಿವೆ, ಯಾರು ಯಾರೋ ಏನೇನೂ ಮಾತಾಡುವುದು ಕೇಳುತ್ತಿತ್ತು . ಇಹದ ಅರಿವಿಲ್ಲ. ಗಂಡಸರು ಎಲ್ಲಾ ಮುಗಿಸಿ ಮನೆಗೆ ಬರುವ ಹೊತ್ತಿಗೆ ಇಳಿ ಸಂಜೆ. ಊಟ ಬೇಡ, ನಿದ್ರೆ ಬೇಡ, ಅಳು ಬರುತ್ತಿಲ್ಲ. ಹಾಗಂತ ಸುಮ್ಮನೆ ಇರಲು ಸಾಧ್ಯವೇ ಇಲ್ಲ ಎನ್ನುವ ಮನಸ್ಥಿತಿ . ದಿನ ಕಳೆದಂತೆ ದುಃಖ ಹೆಚ್ಚುತ್ತಲೇ ಇದೆ . ಸಂಬಂಧವೇ ಇಲ್ಲದಂಥ ಬದುಕು ಬದುಕಿ, ನಿರ್ಲಿಪ್ತ ಭಾವ ಬರುತ್ತನೇ ಇಲ್ಲ. ಏನೋ ಒಂದು ಅವಿನಾಭಾವ ಸಂಬಂಧವಿದೆ ಗಾಢವಾದದ್ದು ಅನ್ನಿಸಿ ಅತ್ತು ಬಿಡ ಬೇಕು ಅನ್ನಿಸಿತು ಒಮ್ಮೆ. ಹಗುರವಾಗಿತ್ತು ಜೀವ. ತಿಂಗಳು ಕಳೆದರೂ ಇನ್ನೂ ನೆಂಟರು ಇದ್ದರು. ಮನಸ್ಸಿಗೆ ಬಂದಂತೆ ಮಾತು ಅವರಿಗೆ ಬೇಕಾ0ದತೆ . ಕಿವಿ ಕೊಡಲಿಲ್ಲ. ಒಬ್ಬಬ್ಬರೇ ಹೊರಟರು. ಈಗ ಮನೆ ಬಿಕೋ ಎನ್ನುತ್ತಿತ್ತು . ನಿತ್ಯ ಕೆಲಸಕ್ಕೆ ಬೇರೆ ಜನ ಬಂದಿತ್ತು. ಕಾಲ ಕಳೆಯುವ ಬದಲು ಕಾಲ ಸವೆಸ ಬೇಕಿತ್ತು . ಸಾಂತ್ವನ ಹೇಳಿ ಅಣ್ಣಾ ,ಅಪ್ಪ , ಅಮ್ಮನು ಹೊರಟರು. ಈಗ ಒಬ್ಬ0ಟಿ, ಕಾಡಕ್ಕೆ ಶುರು, ಅದೇ ಕೋಣೆ , ಮಂಚ, ಅವರ ನೋಟ ,ಮಿಂಚಿನಂತ ಕಣ್ಣುಗಳು ಅರಸುತ್ತಾ ಇದೆ ಏನೋ ಎಂಬ ಭಾವ, ಹೊರ ಬರಲು ಹೋರಾಟ ಮಾಡ ಬೇಕಾದ ಸ್ಥಿತಿ. ವಿಷಾದನೀಯ. ಇದರಲ್ಲಿ ಯಾರ ತಪ್ಪು. ಎಲ್ಲೂ ಏನು ಕಾಣುತ್ತಿಲ್ಲ , ಆದರೂ ದುಃಖ ಮಾತ್ರ ಪಾಲಿಗೆ. ಯಾರ ತಪ್ಪಿಗೆ ಯಾರಿಗೆ ಶಿಕ್ಷೆ ವಿಧಿ ವಿಧಿಸಿದೆ . ಒಂದು ದಿನ ಮನೆಯಲ್ಲಿ ಎಲ್ಲರೂ ಇರುವಂತೆ ಅಪ್ಪ ಅಮ್ಮನೂ ಸೇರಿ, ಮನೆಯ ವಹಿವಾಟು ನೋಡಿಕೊಳ್ಳವ ವಕೀಲರು ಬಂದರು. ಏನೋ ಆಫೀಸ್ ವ್ಯವಹಾರ ಅಂತ ಕೋಣಯಲ್ಲಿ ಕುಳಿತೇ , ಮೆಲ್ಲಗೆ ಮಾತು ಶುರುವಾಯಿತು , ಪ್ರಸ್ತಾಪ ವಿಲ್ಲಿನದು . ಕುತೂಹಲ ಕೆರಳಿತು. ಯಜಮಾನರು ತಮ್ಮ

ಎಲ್ಲ ಆಸ್ತಿಗಳ ವಿವರ ನೀಡಿ ವರ್ಗ ಮಾಡಲಾಗಿದೆ ಎಂದು ತಿಳಿಸಿದರು. ದಿಗ್ಭ ಭ್ರಮೆ, ಜೋತೆಗೆ ಆಶ್ಚರ್ಯ. ಮತ್ತೆ ಬೇರೆ ಮದುವೆ ಆಗಬೇಕು ಎಂದು ಆಗ್ರಹ. ತಲೆ ತಿರುಗಿ ಬಂದಿತ್ತು. ಎಂಥ ಅದ್ಭುತ ಮತ್ತು ಅಪರೂಪದ ವ್ಯಕ್ತಿ . ಸಾವು ಬೇರೆ ಮಾಡಿದ್ದಕ್ಕೆ ಆ ದೇವರಿಗೆ ಧಿಕ್ಕಾರವಿರಲಿ . ರೊಧಿಸಿತು ಮನ. ಕಾರಣವೇ ಇಲ್ಲದ ಸಾವು, ,ಬದುಕಿನ, ನಡುವೆ ಸುಂದರ ನೆನಪುಗಳ ಮೆರವಣಿಗೆ ಸಾಗಿತ್ತು . ಏಕೆ ಹೀಗೆ. ಕೊನೆಯಲ್ಲಿ ಸಾವಿನ ಕಾರಣ ಹೇಳಿದ ಅವರು ಅದಕ್ಕೆ ಕೊಟ್ಟ ಹೆಸರು ಮಾತ್ರ ಸುಂದರ ಅತಿ ಸುಂದರ ಡಿಪ್ರೇಶನ್ . ಇದು ಹೇಗೆ ಸಾಧ್ಯ. ತಾಯಿ ಹೋದ ದುಃಖ ಮನಕ್ಕೆ ತಡೆಯಲು ಸಾಧ್ಯವಾಗಲೇ ಇಲ್ಲ. ಮದುವೆ ಮಾಡಿದರೆ ಸರಿ ಆಗುತ್ತೆ ಅಂತ ಹಿರಿಯರು ತಗೊಂಡ ತೀರ್ಮಾನ ಬದುಕನ್ನು ಬರಡು ಮಾಡಿತ್ತು . ಯಾರಿಗೂ ಅರಿವಿಗೆ ಬಾರದೇ ದಿನಾ ಏನೋ ಮಾತ್ರೆ ತೆಗೆದುಕೊಂಡು ಅದು ಜಾಸ್ತಿ ಆಗಿ ಬ್ರನ್ ಡೆಡ್ಡ ( **brain dead** ) ಆಗಿತ್ತು. ಇಷ್ಟು ತಾಯಿಯನ್ನು ಪ್ರೀತಿಸುವ, ಹಚ್ಚಿಕೊಳ್ಳವ ಮಗ, ಧನ್ಯ ಆ ತಾಯಿ. ಎಲ್ಲವೂ ಮುರಿದಿತ್ತು , ಮುಗಿದಿತ್ತು ಅನ್ನುವ ಅರಿವು ಮೂಡುವ ಮುನ್ನ ಮನ ನಿರ್ಧಾರ ಮಾಡಿತ್ತು . ಬೇರೆ ಮದುವೆ ಯೋಚನೆ ಕೂಡ ಮಾಡಲ್ಲ . ಅವರ ಆಸ್ತಿಯಲ್ಲಿ ಒಂದು ಮಾತೃ ಛಾಯಾ ಸ್ಥಾಪಿಸಿ, ಅನಾಥ, ಇಳಿ ವಯಸ್ಸಿನ ವೃದ್ಧೆಯರನ್ನು ನೋಡಿ ಕೊಂಡು ಬದುಕಿನ ಇಳಿ ಸಂಜೆಯಲಿ ಸಾಗುತ್ತಿದೆ. ಎಂದೂ ಪರಿತಪಿಸಿಲ್ಲ , ವ್ಯಥೆ ಪಟ್ಟಿದ್ದಿಲ್ಲ , ಕಣ್ಣೀರು ಇಟ್ಟಿದ್ದಿಲ್ಲ , ವ್ಯರ್ಥ ಎನಿಸಲಿಲ್ಲ. ಒಂದೇ ಶಾಂತ ಚಿತ್ತದಿಂದ ವಹಿಸಿ ಕೊಂಡ ಕರ್ತವ್ಯ ನಿರ್ವಹಿಸಲು ಸಾಧ್ಯವಾಗಿದೆ ಅಂತ ಸೋಜಿಗದ ಸಂಗತಿ.

ಕರ್ತವ್ಯ ಲೋಪ ಎಸಗಿದ ಭಾವ ಬೇಡ ಎಂದು ಮತ್ತೆ ಮದುವೆಯಾಗ ಬೇಕು ಅನ್ನುವ ಯೋಚನೆಗೆ ಕಡಿವಾಣ ಹಾಕಲು ಕಠಿಣ, ಆದರೂ ನನ್ನದಲ್ಲದ ತಪ್ಪಿಗೆ ಶಿಕ್ಷೆ ಯಾಕೆ, ಕ್ಷಮೆ ಯಾರಿಗೆ, ಬದುಕು ಎಂದಿಗೂ ಉತ್ತರಿಸಿಲ್ಲ , ಹುಡುಕುವ ಕ್ಲೀಷೆಯೆ ಬೇಡ ಎಂದು ಸಲಹೆ, ಮನವಿ ಎಲ್ಲವನ್ನೂ ಮೀರಿ ಜೀವನ ಪಯಣ ನಿಲ್ಲದಂತೆ ಸಾಗಿದೆ ಆದರೆ ನಿನ್ನ ಪ್ರೀತಿಯಾ ಬೇಡಿ. ನನ್ನ ಅಂತರಂಗದ ಭಾವನೆಗಳು ಮೃದಂಗ ಬಾರಿಸಿದಂತೆ ಭಾಸ.